# ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು

## Karnataka School Quality Assessment & Accreditation Council

ಕೆ.ಎಸ್.ಇ.ಇ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03, ದೂರವಾಣಿ ಸಂಖ್ಯೆ:080–23341615, 23562283, 29720300

ಫ್ಯಾಕ್ಸ್: 080–23347670 e-mail: ksqaacbangalore@gmail.com, ksqaacbengaluru@gmail.com


ಸಂಖ್ಯೆ: ಕೆ5/ಉ.ನಿ.ಕ.ಹೊ.ಆ.ವಾ.ಪ.ಬಗ್ಗೆ/08/2021–22 ದಿನಾಂಕ:06.06.2022

### ದರಪಟ್ಟಿ ಆಹ್ವಾನ ಪತ್ರ

ವಿಷಯ: ಇಂಡಿಕಾ ನಾನ್ ಎ.ಸಿ ಕಾರು/ತತ್ಸಮಾನ ವಾಹನವನ್ನು ಕೆ.ಎಸ್.ಕ್ಯು.ಎ.ಎ.ಸಿ ಕಛೇರಿ ಕಾರ್ಯಕ್ಕಾಗಿ ಒಂಬತ್ತು ತಿಂಗಳ ಅವಧಿಗೆ ಮಾತ್ರ ದರಪಟ್ಟಿ ಆಹ್ವಾನಿಸುವ ಬಗ್ಗೆ.

******

ಉಪನಿರ್ದೇಶಕರ ಕಛೇರಿ, ಕೆ.ಎಸ್.ಕ್ಯು.ಎ.ಎ.ಸಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03, ಈ ಕಛೇರಿ ಕಾರ್ಯಕ್ಕೆ ದಿನಾಂಕ:01.07.2022 ರಿಂದ 31.03.2023 ರವರೆಗೆ ಒಂಬತ್ತು ತಿಂಗಳ ಅವಧಿಗೆ ಇಂಡಿಕಾ ನಾನ್ ಎ.ಸಿ ಕಾರು/ತತ್ಸಮಾನ ವಾಹನವನ್ನು ಈ ಕೆಳಕಂಡ ನಿಬಂಧನೆಗಳಿಗೆ ಒಳಪಟ್ಟು, ಅರ್ಹ ಸಂಸ್ಥೆಗಳಿಂದ ದರಪಟ್ಟಿಯನ್ನು ಆಹ್ವಾನಿಸಲಾಗಿದೆ.

**ಷರತ್ತುಗಳು;**

1. ಒಂದು ತಿಂಗಳಿಗೆ ತಗಲುವ ಇಂದನ ವೆಚ್ಚ ಚಾಲಕನ ವೇತನ, ಚಾಲಕನ ಬಾಟ ಹಾಗೂ ವಾಹನದ ರಿಪೇರಿ ಸೇರಿ ತಗಲುವ ಬಾಡಿಗೆ, ತೆರಿಗೆಗಳನ್ನು ಒಳಗೊಂಡಂತೆ ಸೇರಿ ದರ ನಮೂದಿಸತಕ್ಕದ್ದು. ಒಳ್ಳೆಯ ಸುಸ್ಥಿತಿಯಲ್ಲಿರುವ 2017ರ ನಂತರ ಇರುವ ಮಾಡಲ್ ವಾಹನ ಒದಗಿಸುವುದು.
2. ಅನುಮೋದನೆಯಾದ ದರವು ಕರಾರು ಒಪ್ಪಂದ ದಿನಾಂಕದಿಂದ ಒಂಬತ್ತು ತಿಂಗಳ ಅವಧಿಯವರೆಗೆ ಚಾಲ್ತಿಯಲ್ಲಿರುತ್ತದೆ.
3. ನಮೂದಿಸಿದ ಒಟ್ಟು ದರದಲ್ಲಿ ಅತಿ ಕಡಿಮೆ ದರ ನಮೂದಿಸಿದ ಸಂಸ್ಥೆಯನ್ನು ಸದರಿ ಕಾರ್ಯಕ್ಕೆ ಆಯ್ಕೆ ಮಾಡಲಾಗುವುದು, ದರ ನಮೂದಿಸಲು ನಾನ್ ಎ.ಸಿ ಕಾರಿಗೆ ಪ್ರತ್ಯೇಕ ದರವನ್ನು ನಮೂದಿಸತಕ್ಕದ್ದು.
4. ವಾಹನಕ್ಕೆ ದರ ನಮೂದಿಸುವಾಗ ಸರ್ಕಾರಿ ಆದೇಶ ಸಂಖ್ಯೆ:ಸಿ ಆಸುಇ30 ಶಿವಾನಿ 2019 ಬೆಂಗಳೂರು ದಿನಾಂಕ:31.03.2022 ರಂತೆ ಎಲ್ಲಾ ತೆರಿಗೆಗಳನ್ನು ಸೇರಿಸಿ ದರ ನಮೂದಿಸತಕ್ಕದ್ದು.
5. ದರಪಟ್ಟಿಯಲ್ಲಿ ನಮೂದಿಸಿರುವ ದರವೇ ಅಂತಿಮವಾಗಿದ್ದು, ನಂತರದಲ್ಲಿ ಹೆಚ್ಚುವರಿ ದರಕ್ಕೆ ಬಿಲ್ ಸಲ್ಲಿಸಲು ಅವಕಾಶವಿರುವುದಿಲ್ಲ.
6. ಮಂಡಳಿಯು ಸೂಚಿಸಿದ ದಿನಾಂಕದಿಂದ ತಿಳಿಸಿದ ಸಮಯಕ್ಕೆ ಸರಿಯಾಗಿ ಹಾಗೂ ಸೂಚಿಸಿದ ಸ್ಥಳಕ್ಕೆ ವಾಹನವನ್ನು ಒದಗಿಸಬೇಕು.
7. ನೀಡಿದ ವಾಹನ ಮತ್ತು ಚಾಲಕನನ್ನೇ ಮುಂದುವರೆಸತಕ್ಕದ್ದು. ಇದರಲ್ಲಿ ಯಾವುದೇ ಸಮಸ್ಯೆ ಇದ್ದಲ್ಲಿ ಮಂಡಳಿಗೆ ತಿಳಿಸಿ ಕೂಡಲೇ ಬದಲಿ ವ್ಯವಸ್ಥೆ ಮಾಡುವುದು.
8. ಸಂಸ್ಥೆಯು ಒದಗಿಸುವ ವಾಹನಗಳು ಸುಸ್ಥಿತಿಯಲ್ಲಿರಬೇಕು. ರಾಜ್ಯ ಪರವಾನಿಗೆ ಪಡೆದಿರಬೇಕು ಹಾಗೂ ಕಾಂಪ್ರಹೆನ್ಸಿವ್ ವಿಮಾ ಪಾಲಿಸಿ ಮತ್ತು ರಸ್ತೆ ಪರವಾನಿಗೆಯು ಚಾಲ್ತಿಯಲ್ಲಿರಬೇಕು.

9. ಒಂದು ವೇಳೆ ಸಂಸ್ಥೆಯು ನಿಗಧಿತ ಸಮಯಕ್ಕೆ ವಾಹನವನ್ನು ಒದಗಿಸಲು ವಿಫಲವಾದಲ್ಲಿ ಮಂಡಳಿಯು ಮಾಡಿಕೊಳ್ಳುವ ಪ್ರತ್ಯೇಕ ವ್ಯವಸ್ಥೆಯಿಂದ ಮಂಡಳಿಗೆ ಉಂಟಾಗುವ ನಷ್ಟವನ್ನು ಮಂಡಳಿಯು ನಿಗದಿಪಡಿಸುವ ದಂಡದೊಂದಿಗೆ ಪಾವತಿಸಲು ಸಂಸ್ಥೆಯು ಬದ್ಧವಾಗಿರಬೇಕು. ಇಲ್ಲವಾದಲ್ಲಿ ಸದರಿ ಮೊತ್ತವನ್ನು ಮಂಡಳಿಯು ಮುಂದೆ ಪಾವತಿಸಲಾಗುವ ಬಿಲ್‌ನಲ್ಲಿ ಅಥವಾ ಭದ್ರತಾ ಠೇವಣಿಯಲ್ಲಿ ಕಟಾಯಿಸಲಾಗುವುದು.
10. ಸಂಸ್ಥೆಯು ಒದಗಿಸುವ ವಾಹನಕ್ಕೆ ಸಂಬಂಧಿಸಿದ ವಾಹನ ಚಾಲಕರು ವಾಹನ ಚಾಲನೆಯ ಲೈಸನ್ಸ್ ಹೊಂದಿರಬೇಕು ಮತ್ತು ಪೂರ್ಣ ಅನುಭವ ಹೊಂದಿರಬೇಕು. ಅಲ್ಲದೆ ಸೇವೆ ಪಡೆಯುತ್ತಿರುವವರೊಂದಿಗೆ ಅತ್ಯಂತ ಜವಾಬ್ದಾರಿಯುತವಾಗಿ ಸೌಜನ್ಯ ಶಿಸ್ತು ಮತ್ತು ಸಂಯಮದಿಂದ ವರ್ತಿಸಿ ಸಹಕರಿಸುವಂತೆ ನಡೆದುಕೊಳ್ಳಬೇಕು.
11. ವಾಹನದ ಬಾಡಿಗೆಯಲ್ಲಿ ತಿಂಗಳಿಗೊಮ್ಮೆ ಪಾವತಿಸಲಾಗುವುದು.
12. ಯಾವುದೇ ಮುಂಗಡ ಹಣ ನೀಡುವುದಿಲ್ಲ. ಪ್ರತಿ ತಿಂಗಳು ಬಿಲ್ ಪಾವತಿಯಲ್ಲಿ ನಿಯಮಾನುಸಾರ ಟಿ.ಡಿ.ಎಸ್ ಮತ್ತು ಜಿ.ಎಸ್.ಟಿ ತೆರಿಗೆಯನ್ನು ಕಟಾಯಿಸಲಾಗುವುದು.
13. ಹೊರಗುತ್ತಿಗೆ ಆಧಾರದ ಮೇಲೆ ಪಡೆದ ವಾಹನ ಆಕಸ್ಮಿಕವಾಗಿ ಕೆಟ್ಟುಹೋದಲ್ಲಿ ತುರ್ತಾಗಿ ತಾತ್ಕಾಲಿಕವಾಗಿ ಬೇರೊಂದು ವಾಹನವನ್ನು ಏಜೆಂನ್ಸಿಯವರೇ ವ್ಯವಸ್ಥೆ ಮಾಡತಕ್ಕದ್ದು.
14. ಕಾರ್ಯದೇಶ ನೀಡಿದ ನಂತರ ಶಿಕ್ಷಣ ಇಲಾಖೆಯಿಂದ ವಾಹನ ಬಂದಲ್ಲಿ ಅಥವಾ ಈ ಸಂಸ್ಥೆಯಿಂದ ಸ್ವಂತ ವಾಹನ ಖರೀದಿ ಮಾಡಿದಲ್ಲಿ. ಹೊರಗುತ್ತಿಗೆ ಕಾರ್ಯಾದೇಶ ತಾನಾಗಿಯೇ ರದ್ದುಗೊಳ್ಳಲಿದೆ.
15. ಇತರೆ ಷರತ್ತುಗಳಿದ್ದಲ್ಲಿ ದರಪಟ್ಟಿಯಲ್ಲಿ ನಮೂದಿಸತಕ್ಕದ್ದು.
16. ಕಾರ್ಯಾದೇಶ ನೀಡಿದ ತಕ್ಷಣ ಷರತ್ತುಗಳಂತೆ ನಡೆದುಕೊಳ್ಳುವ ಬಗ್ಗೆ ಛಾಪಾ ಕಾಗದದಲ್ಲಿ ಒಡಂಬಡಿಕೆ ಪತ್ರ ನೀಡತಕ್ಕದ್ದು.

ಮೇಲ್ಕಂಡ ಷರತ್ತುಗಳನ್ವಯ **"ಇಂಡಿಕಾ ನಾನ್ ಎ.ಸಿ ಕಾರು/ತತ್ಸಮಾನ ವಾಹನದ"** ಪ್ರತಿ ದಿನದ ಬಳಕೆಗೆ ಒಂಬತ್ತು ತಿಂಗಳ ಅವಧಿಗೆ ಬಾಡಿಗೆ ಆಧಾರದ ಮೇಲೆ ವಾಹನ ಒದಗಿಸುವ ಕಾರ್ಯಕ್ಕೆ ನಿಮ್ಮ ಸಂಸ್ಥೆಯ ಕನಿಷ್ಟ ದರಗಳ ಪಟ್ಟಿಯನ್ನು ದಿನಾಂಕ:20.06.2022ರೊಳಗಾಗಿ ಸೀಲು ಮಾಡಿದ ಲಕೋಟೆಯಲ್ಲಿ **ಕಾರ್ಯನಿರ್ವಾಹಕ ನಿರ್ದೇಶಕರು, ಕೆ.ಎಸ್.ಕ್ಯೂ.ಎ.ಎಸಿ, ಪರೀಕ್ಷೆಗಳು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03.** ಇವರಿಗೆ ಖುದ್ದಾಗಿ ಅಥವಾ ಅಂಚೆಯ ಮೂಲಕ ಸಲ್ಲಿಸಲು ತಿಳಿಸಲಾಗಿದೆ. ಹಾಗೂ ಲಕೋಟೆಯ ಮೇಲೆ **"ಮಂಡಳಿಗೆ ಇಂಡಿಕಾ ನಾನ್ ಎ.ಸಿ ಕಾರು ಒದಗಿಸುವ ಕಾರ್ಯಕ್ಕೆ ದರಪಟ್ಟಿ ಸಲ್ಲಿಸುತ್ತಿರುವ ಕುರಿತು."**ಎಂದು ನಮೂದಿಸುವುದು. ಹೆಚ್ಚಿನ ಮಾಹಿತಿಯನ್ನು ಕಛೇರಿ ವೇಳೆಯಲ್ಲಿ ಕೆ.ಎಸ್.ಕ್ಯೂ.ಎ.ಎಸಿ ಕಛೇರಿ, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03, ರವರಿಂದ ಪಡೆಯಬಹುದಾಗಿದೆ.

ಕಾರ್ಯನಿರ್ವಾಹಕ ನಿರ್ದೇಶಕರು,
ಕೆ.ಎಸ್.ಕ್ಯೂ.ಎ.ಎಸಿ

<u>ಪ್ರತಿಗಳು</u>
1.ಮಂಡಳಿಯ ಸೂಚನಾ ಫಲಕಕ್ಕೆ
2.ಕಛೇರಿ ಪ್ರತಿ

ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು
**Karnataka School Quality Assessment & Accreditation Council**
ಕೆ.ಎಸ್.ಇ.ಇ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–03, ದೂರವಾಣಿ ಸಂಖ್ಯೆ:080–23341615, 23562283, 29720300
ಫ್ಯಾಕ್ಸ್: 080–23347670 e-mail: ksqaacbangalore@gmail.com, ksqaacbengaluru@gmail.com

ಸಂಖ್ಯೆ: ಕೆ5/ಉ.ನಿ.ಕ.ಹೊ.ಆ.ವಾ.ಪ.ಬಗ್ಗೆ/08/2021–22 ದಿನಾಂಕ:06.06.2022

ಇಂಡಿಕಾ ನಾನ್ ಎ.ಸಿ ಕಾರು/ ತತ್ಸಮಾನ ವಾಹನವನ್ನು ಒದಗಿಸುವ ಸಂಬಂಧ ಆಹ್ವಾನಿಸಲಾದ ದರಪಟ್ಟಿ

| ಬೆಂಗಳೂರು ನಗರದಲ್ಲಿ ಇಂಡಿಕಾ ನಾನ್ ಎ.ಸಿ ಕಾರು | | |
|---|---|---|
| ಎಲ್ಲಾ ತೆರಿಗೆ ಸೇರಿ ಒಂದು ತಿಂಗಳಿಗೆ ಕನಿಷ್ಠ ದರ 2500 ಕಿ.ಮೀ ಅಥವಾ 300 ಗಂಟೆಗೆ | ಪ್ರತಿ ಹೆಚ್ಚುವರಿ ಕಿ.ಮೀ.ಗೆ ದರ | ಹೆಚ್ಚುವರಿ ಅವಧಿಗೆ |
| | | |
| ಬೆಂಗಳೂರು ನಗರ ಪ್ರದೇಶಕ್ಕೆ ಚಾಲಕರಿಗೆ ದೈನಿಕ ಬಾಟಾ ನೀಡಲಾಗುವುದಿಲ್ಲ. | | |

ಕಾರ್ಯನಿರ್ವಾಹಕ ನಿರ್ದೇಶಕರು,
ಕೆ.ಎಸ್.ಕ್ಯೂ.ಎ.ಎ.ಸಿ